ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 09-01-1980.

# *ಅಲೌಕಿಕ ವಸ್ತ್ರ ಮತ್ತು ಅಲೌಕಿಕ ಶೃಂಗಾರ*

(अलौकिक ड्रेस और अलौकिक श्रृंगार)

ಇಂದು ಬಾಪ್‌ದಾದಾರವರು ವಿಶೇಷವಾಗಿ ನಾಲ್ಕೂಕಡೆಯಲ್ಲಿರುವ ಮಕ್ಕಳ ರಮಣೀಕವಾದ ರಂಗನ್ನು ನೋಡುತ್ತಿದ್ದರು. ಅದನ್ನು ನೋಡಿ ಮುಗುಳ್ನಗುತ್ತಿದ್ದರು ಮತ್ತು ಕೆಲವೊಂದುಕಡೆ ನಗೂ ಸಹ ಬರುತ್ತಿತ್ತು. ಯಾವ ಬಣ್ಣವಿತ್ತು? ಬಾಪ್‌ದಾದಾರವರು ನೋಡುತ್ತಿದ್ದರು- ಸಂಗಮಯುಗೀ, ಸರ್ವಶ್ರೇಷ್ಠ ವಜ್ರಸಮಾನಯುಗದ ನಿವಾಸಿಗಳು ಮತ್ತು ಸರ್ವಶ್ರೇಷ್ಠ ಬಾಪ್‌ದಾದಾದಾರವರ ಮಕ್ಕಳು, ಈಶ್ವರನ ಸಂತಾನರು, ಬ್ರಾಹ್ಮಣಕುಲದ ಸರ್ವಶ್ರೇಷ್ಠ ಆತ್ಮರು ಹಾಗೂ ಮುದ್ದಾದ, ಅಗಲಿಮರಳಿ ಸಿಕ್ಕಿರುವ ಮಕ್ಕಳಿಗೆ ಇಡೀ ದಿನಕ್ಕಾಗಿ ವಿಶೇಷ ಭಿನ್ನ ಭಿನ್ನ ಪ್ರಕಾರದ ವಸ್ತ್ರ(ಡ್ರೆಸ್)ಮತ್ತು ಶೃಂಗಾರವನ್ನು ಕೊಟ್ಟಿದ್ದಾರೆ, ಜೊತೆಜೊತೆಗೆ ಕುಳಿತು ಕೊಳ್ಳುವುದಕ್ಕಾಗಿ ಎಷ್ಟೊಂದು ಶ್ರೇಷ್ಠಸ್ಥಾನ ಅಥವಾ ಆಸನಗಳನ್ನು ಬಾಪ್‌ದಾದಾರವರು ಕೊಟ್ಟಿದ್ದಾರೆ. ಎಂತಹ ಸಮಯವೋ ಅಂತಹ ವಸ್ತ್ರ ಮತ್ತು ಅದೇ ರೀತಿಯ ಶೃಂಗಾರವನ್ನೂ ಮಾಡಿಕೊಳ್ಳಬಹುದು. ಸತ್ಯಯುಗದಲ್ಲಿ ಭಿನ್ನ ಭಿನ್ನ ವಸ್ತ್ರಗಳು ಮತ್ತು ಶೃಂಗಾರವನ್ನು ಬದಲಾಯಿಸುತ್ತಾರೆ ಆದರೆ ಸಂಸ್ಕಾರವನ್ನಂತು ಇಲ್ಲಿಂದಲೇ ತುಂಬಿ ಕೊಳ್ಳಬೇಕಲ್ಲವೆ. ಬ್ರಹ್ಮಾತಂದೆಯು ಸಂಗಮಯುಗದ ಭಿನ್ನ-ಭಿನ್ನ ವಸ್ತ್ರಗಳು ಮತ್ತು ಶೃಂಗಾರದಿಂದ ಬ್ರಾಹ್ಮಣಮಕ್ಕಳನ್ನು ಶೃಂಗರಿಸಿದ್ದಾರೆ. ಆದರೆ ರಮಣೀಕ ಬಣ್ಣವನ್ನೇನು ನೋಡಿದರು? ಇನ್ನೂ ಸುಂದರವಾದ ವಸ್ತ್ರಗಳು ಮತ್ತು ಶೃಂಗಾರವಿದ್ದರೂ ಕೆಲಕೆಲವು ಮಕ್ಕಳು ಹಳೆಯ ಕೊಳಕಾದ ವಸ್ತ್ರಗಳನ್ನೇ ಹಾಕಿಕೊಂಡುಬಿಡುತ್ತಾರೆ.

**ಎಂತಹ ವಸ್ತ್ರವೋ ಅಂತಹ ಶೃಂಗಾರ**.

ಅಮೃತವೇಳೆಯ ಉಡುಪು(ವಸ್ತ್ರ) ಮತ್ತು ಶೃಂಗಾರವನ್ನು ತಿಳಿದಿದ್ದೀರಾ? ಇಡೀದಿನದ ಭಿನ್ನ-ಭಿನ್ನ ವಸ್ತ್ರ ಮತ್ತು ಶೃಂಗಾರವನ್ನು ತಿಳಿದಿದ್ದೀರಾ? ಮಕ್ಕಳಿಗಾಗಿ ಬಾಪ್‌ದಾದಾರವರ ಮೂಲಕ ಭಿನ್ನ-ಭಿನ್ನ ಬಿರುದುಗಳು ಸಿಕ್ಕಿವೆ, ಅಂದಮೇಲೆ ಭಿನ್ನ ಭಿನ್ನ ಬಿರುದುಗಳ ಸ್ಥಿತಿಯೆಂಬ ವಸ್ತ್ರ ಮತ್ತು ಭಿನ್ನ ಭಿನ್ನ ಗುಣಗಳ ಶೃಂಗಾರದ ಸೆಟ್ ಇದೆ. ಎಷ್ಟೊಂದು ಪ್ರಕಾರದ ವಸ್ತ್ರಗಳು ಮತ್ತು ಸೆಟ್ ಇದೆ. ಎಂತಹ ವಸ್ತ್ರವೋ ಅಂತಹ ಶೃಂಗಾರದ ಸೆಟ್ ಮತ್ತು ಹಾಗೆಯೇ ಶೃಂಗರಿತವಾದ ಸೀಟ್ ಮೇಲೆ ಸದಾ ಸ್ಥಿತರಾಗಿರಿ. ತಮ್ಮ ವಸ್ತ್ರಗಳ ಲೆಕ್ಕ ಮಾಡಿರಿ- ಎಷ್ಟಿವೆ? ಅದೇ ಬಿರುದುಗಳ ಸ್ಥಿತಿಯಲ್ಲಿ ಸ್ಥಿತರಾಗುವುದು ಅರ್ಥಾತ್ ವಸ್ತ್ರಗಳನ್ನು ಧಾರಣೆ ಮಾಡುವುದು. ಕೆಲವೊಮ್ಮೆ ವಿಶ್ವಕಲ್ಯಾಣಕಾರಿಯ ವಸ್ತ್ರವನ್ನು ಧರಿಸಿ, ಕೆಲವೊಮ್ಮೆ ಮಾಸ್ಟರ್ ಸರ್ವಶಕ್ತಿವಂತನದು ಮತ್ತು ಕೆಲವೊಮ್ಮೆ ಸ್ವದರ್ಶನ ಚಕ್ರಧಾರಿಯ ವಸ್ತ್ರವನ್ನು ಧರಿಸಿರಿ. ಎಂತಹ ಸಮಯವೋ ಅಂತಹ ವಸ್ತ್ರವನ್ನು ಧಾರಣೆ ಮಾಡಿರಿ. ಜೊತೆಜೊತೆಗೆ ಭಿನ್ನ-ಭಿನ್ನ ಗುಣಗಳ ಶೃಂಗಾರ ಮಾಡಿಕೊಳ್ಳಿರಿ. ಈ ಭಿನ್ನ-ಭಿನ ಶೃಂಗಾರದ ಸೆಟ್‌ನ್ನು ಧಾರಣೆ ಮಾಡಿರಿ. ಕೈಗಳಲ್ಲಿ, ಕೊರಳಿನಲ್ಲಿ, ಕಿವಿಗಳಲ್ಲಿ ಮತ್ತು ಮಸ್ತಕದಲ್ಲಿ ಈ ಶೃಂಗಾರವಿರಲಿ. ಮಸ್ತಕದಲ್ಲಿ ಈ ಸ್ಮೃತಿಯ ಧಾರಣೆ ಮಾಡಿರಿ- 'ನಾನು ಆನಂದ ಸ್ವರೂಪನಾಗಿದ್ದೇನೆ'- ಇದು ಮಸ್ತಕದ ತಿಲಕವಾಯಿತು. ಮುಖದ ಮೂಲಕ ಅರ್ಥಾತ್ ಕೊರಳಿನಲ್ಲಿಯೂ ಆನಂದ ಕೊಡುವ ಮಾತುಗಳಿರಲಿ- ಇದು ಕೊರಳಿನ ಮಾಲೆಯಾಯಿತು. ಕೈಗಳ ಮೂಲಕ ಅರ್ಥಾತ್ ಕರ್ಮದಲ್ಲಿ ಆನಂದ ಸ್ವರೂಪದ ಸ್ಥಿತಿಯಿರಲಿ- ಇದು ಕೈಗಳಿಗೆ ಬಳೆಗಳಾಯಿತು. ಕಿವಿಗಳ ಮೂಲಕವೂ ಆನಂದ ಸ್ವರೂಪರಾಗುವ ಮಾತುಗಳನ್ನು ಕೇಳುತ್ತಿರಬೇಕು- ಇದು ಕಿವಿಗಳ ಶೃಂಗಾರವಾಯಿತು. ಕಾಲುಗಳ ಮೂಲಕ ಆನಂದ ಸ್ವರೂಪರಾಗುವ ಸೇವೆಯಕಡೆ ಹೆಜ್ಜೆಯಿರಲಿ ಅರ್ಥಾತ್ ಹೆಜ್ಜೆ-ಹೆಜ್ಜೆಯಲ್ಲಿ ಆನಂದ ಸ್ವರೂಪರಾಗುವ ಮತ್ತು ಅನ್ಯರನ್ನು ಮಾಡುವುದಕ್ಕಾಗಿಯೇ ಇಡಬೇಕು ಇದು ಕಾಲುಗಳ ಶೃಂಗಾರವಾಯಿತು. ಈಗ ಒಂದು ಸೆಟ್ಟನ್ನು ತಿಳಿದುಕೊಂಡಿದ್ದೀರಿ? ಪೂರ್ಣವಾಗಿ ಸೆಟ್‌ನ್ನು ಧಾರಣೆ ಮಾಡಿಕೊಂಡಿದ್ದೀರಾ? ಅದೇ ರೀತಿ ಭಿನ್ನ ಭಿನ್ನ ಸಮಯದಲ್ಲಿ ಭಿನ್ನ ಭಿನ್ನ ಸೆಟ್‌ನ್ನು ಧಾರಣೆ ಮಾಡಿರಿ,

ಸೆಟ್ ಧಾರಣೆ ಮಾಡುವುದಂತು ಬರುತ್ತದೆಯಲ್ಲವೆ? ಅಥವಾ ಕಿವಿಗಳಿಗೆ ಧರಿಸುತ್ತೀರೆಂದರೆ ಕೊರಳಿಗೆ ಬಿಟ್ಟುಬಿಡುತ್ತೀರಾ. ಹಾಗೆ ನೋಡಿದರೆ ವರ್ತಮಾನ ಪ್ರಪಂಚದಲ್ಲಿ ಸೆಟ್ ಹಾಕಿಕೊಳ್ಳುವ ಪದ್ಧತಿಯಿದೆ. ಅಂದಮೇಲೆ ತಮಗೆ ಶ್ರೇಷ್ಠವಾದಶೃಂಗಾರದ ಸೆಟ್ ಇದೆ! ಅದನ್ನು ಧಾರಣೆಯೇಕೆ ಮಾಡುವುದಿಲ್ಲ? ಹಾಕಿಕೊಳ್ಳಲು ಬರುವುದಿಲ್ಲವೇ. ಇಷ್ಟೆಲ್ಲಾ ಭಿನ್ನ ಭಿನ್ನ ಪ್ರಕಾರದ ಸುಂದರವಾದ ವಸ್ತ್ರಗಳನ್ನು ಬಿಟ್ಟು ದೇಹಾಭಿಮಾನದ ಸ್ಮೃತಿಯ ಮಣ್ಣಿರುವ ವಸ್ತ್ರವನ್ನೇಕೆ ಧರಿಸುತ್ತೀರಿ?

**ಅನನ್ಯ ವಸ್ತ್ರದ ಸ್ಪರ್ಧೆ.**

ಇಂದು ವಸ್ತ್ರ ಮತ್ತು ಶೃಂಗಾರದ ಸ್ಪರ್ಧೆಯನ್ನು ನೋಡಿದರು. ಯಾವ ಮಕ್ಕಳು ಇಡೀದಿನದಲ್ಲಿ ಶೃಂಗಾರಿತವಾಗಿರುತ್ತಾರೆ ಮತ್ತು ಯಾವ ಮಕ್ಕಳ ವಸ್ತ್ರವನ್ನು ಬದಲಾಯಿಸುವ ಮತ್ತು ಧರಿಸುವುದು ತೆಗೆಯುವುದರಲ್ಲಿಯೇ ತೊಡಗಿರುತ್ತಾರೆ ಎಂದು. ಈಗೀಗ ಒಂದು ವಸ್ತ್ರವನ್ನು ಧಾರಣೆ ಮಾಡುತ್ತಾರೆ ಮತ್ತು ಈಗೀಗ ಈ ವಸ್ತ್ರವನ್ನು ತೆಗೆದು ಕೊಳಕಾಗಿರುವ ವಸ್ತ್ರವನ್ನು ಧರಿಸಿಬಿಡುತ್ತಾರೆ. ಬಹಳಸಮಯದಲ್ಲಿ ಶ್ರೇಷ್ಠ- ಸುಂದರವಾದ ವಸ್ತ್ರವನ್ನು ತೊಡುವುದಕ್ಕೆ ಸಾಧ್ಯವಿಲ್ಲ. ಅಂದಮೇಲೆ ಏನು ನೋಡಿದರು? ಕೆಲಕೆಲವವು ದುರ್ಗಂಧವಿರುವ ವಸ್ತ್ರವನ್ನು ಧರಿಸಿಬಿಡುತ್ತಿದ್ದರು. ಆ ವಸ್ತ್ರದಿಂದ ದೂರದಿಂದಲೇ ದುರ್ಗಂಧವು ಬರುತ್ತಿತ್ತು. ಕೆಲವರು ದುರ್ಗಂಧವಿರುವ ಚರ್ಮದ ವಸ್ತ್ರವನ್ನು ಧರಿಸಿದ್ದರು. ಅರ್ಥಾತ್ ಕುದೃಷ್ಟಿಯ, ಚರ್ಮವನ್ನು ನೋಡುವ, ಇಂತಹ ದುರ್ಗಂದದ ಚರ್ಮದ ವಸ್ತ್ರವನ್ನೂ ಧರಿಸಿದ್ದರು. ಕೆಲವರ ವಸ್ತ್ರದ ಮೇಲೆ ಕೊಳಕು ಕಲೆಗಳೂ ಆಗಿದ್ದವು. ಅಂದಮೇಲೆ ಕೊಳಕಾದ ಕಲೆಗಳಿರುವ ವಸ್ತ್ರವೂ ಇತ್ತು. ಕೆಲವರ ವಸ್ತ್ರವಂತು ಬಹಳ ಕೊಳಕಾದ ರಕ್ತದ ಕಲೆಗಳೂ ಇದ್ದವು. ಅದೇಕೆ ಇತ್ತು? ಮತ್ತೆ-ಮತ್ತೆ ವಿಕರ್ಮ ಮಾಡುವುದು ಅರ್ಥಾತ್ ಆತ್ಮಘಾತವನ್ನು ಮಾಡಿಕೊಳ್ಳುವುದಾಗಿದೆ. ಆತ್ಮದ ಶ್ರೇಷ್ಠಸ್ಥಿತಿಯ ಘಾತ ಮಾಡಿಕೊಳ್ಳುವಂತಹ ವಸ್ತ್ರಧಾರಣೆ ಮಾಡಿರುವವರೂ ಇದ್ದರು. ಈಗ ಯೋಚನೆ ಮಾಡಿರಿ- ಎಲ್ಲಿ ಸುಂದರವಾದ ಟೈಟಲ್‌ಗಳ ಡ್ರೆಸ್ ಮತ್ತು ಎಲ್ಲಿ ಈ ಕೊಳಕಾದ ಡ್ರೆಸ್! ಶ್ರೇಷ್ಠಾತ್ಮರ ಡ್ರೆಸ್ ಸಹ ಶ್ರೇಷ್ಠವಾಗಿರಬೇಕು. ಅಂದಮೇಲೆ ಏನು ನೋಡಿದರು? ಕೆಲಕೆಲವು ಮಕ್ಕಳು ಇಡೀದಿನದಲ್ಲಿಯೂ ಅದೇ ಶ್ರೇಷ್ಠವಸ್ತ್ರ, ಶೃಂಗಾರದ ಸೆಟ್‌ಅನ್ನು ಧಾರಣೆ ಮಾಡಿಕೊಂಡು, ಬಹಳಚೆನ್ನಾಗಿ ಸೀಟ್‌ನಲ್ಲಿ ಸೆಟ್ ಆಗಿದ್ದರು. ಮತ್ತು ಕೆಲವು ಬಹಳಒಳ್ಳೆಯ ವಸ್ತ್ರವನ್ನು ಧಾರಣೆ ಮಾಡಿಕೊಂಡಿದ್ದರೂ, ತಮ್ಮಮುಂದೆ ಇದ್ದರೂ, ಧಾರಣೆ ಮಾಡಿಕೊಳ್ಳುವ ಬಯಕೆಯಿದ್ದರೂ ಧಾರಣೆ ಮಾಡಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಅಂದಮೇಲೆ ಅಮೃತವೇಳೆಯಿಂದ ಶ್ರೇಷ್ಠಶೃಂಗಾರದ ಸೆಟ್‌ನ್ನು ಧಾರಣೆ ಮಾಡಿಕೊಳ್ಳಿರಿ. ಯಾವಾಗ ಶ್ರೇಷ್ಠ ಟೈಟಲ್ ಗಳ ಡ್ರೆಸ್‌ನ್ನು ಧರಿಸಿ, ಗುಣಗಳ ಶೃಂಗಾರವನ್ನು ಧಾರಣೆ ಮಾಡುತ್ತೀರೋ ಸತ್ಯಯುಗದಲ್ಲಿ ವಿಶ್ವಮಹಾರಾಜ ಅಥವಾ ವಿಶ್ವಮಹಾರಾಣಿಯಂತಿರುವ ವಸ್ತ್ರದ ಹಿಂದೆ ದಾಸ-ದಾಸಿಯರು ಡ್ರೆಸ್‌ನ್ನು ಹಿಡಿದು ನಡೆಯುತ್ತಾರೆ, ಹಾಗೆಯೇ ಈಗ ಮಾಯಾಜೀತ್ ಸಂಗಮಯುಗೀ ಸ್ವರಾಜ್ಯ ಅಧಿಕಾರಿಗಳ ಟೈಟಲ್ ಗಳೆಂಬ ಡ್ರೆಸ್‌ನಲ್ಲಿ ಸ್ಥಿತರಾಗುವ ಸಮಯದಲ್ಲಿ ಈ 5 ತತ್ವಗಳು, ಈ 5 ವಿಕಾರಗಳು ತಮ್ಮ ಡ್ರೆಸ್‌ನ್ನು ಹಿಂದೆ ಹಿಡಿಯುತ್ತದೆ ಅರ್ಥಾತ್ ಅಧೀನವಾಗಿ ನಡೆಯುತ್ತದೆ.

ಅಂದಾಗ ಈ ದೃಶ್ಯವನ್ನು ತಮ್ಮಮುಂದೆ ತಂದುಕೊಳ್ಳಿರಿ ಹೇಗೆ ಮಾಯಾಜೀತರ ಹಿಂದೆ ರಾವಣನ 10 ತಲೆಗಳು, 10 ಸೇವಾಧಾರಿಯಾಗಿ ಹಿಂದೆ ನಡೆಯುತ್ತದೆ. ಆದರೆ ಯಾವಾಗ ವಸ್ತ್ರದ ಟೈಟಲ್ ಇರುತ್ತದೆ ಮತ್ತು ನಿರಂತರ ಅಂದರೆ ಉದ್ದಗಲವಾಗಿರುತ್ತದೆಯೋ, ಆಗಲೇ ಆ 10 ಸೇವಾಧಾರಿಯು ತಮ್ಮ ಹಿಂದೆ-ಹಿಂದೆ ಡ್ರೆಸ್‌ನ್ನು ಹಿಡಿದುಬರುತ್ತವೆ. ವರ್ತಮಾನದ ರಾಜ-ರಾಣಿಯರಿಗೂ ಸಹ ಈ ಉದ್ದಗಲವಾದ ವಸ್ತ್ರವನ್ನು ಹಾಕುತ್ತಾರೆ. ಅದನ್ನು ಎತ್ತಿಡಿಯಲು ಸಾಧ್ಯವಾಗುವಂತಿರುತ್ತದೆ. ಒಂದುವೇಳೆ ನಿರಂತರವಾಗಿರುವುದಿಲ್ಲ, ಟೈಟಲುಗಳು ಬಿಗುವಾಗಿರದಿದ್ದರೆ, ಸೇವಾಧಾರಿಗಳು ಡ್ರೆಸ್‌ನ್ನು ತೆಗೆದುಬಿಡುತ್ತಾರೆ ಏಕೆಂದರೆ ಸಡಿಲವಾಗಿರುತ್ತದೆಯಲ್ಲವೆ. ಅಂದಾಗ ಈಗ ಧೃಡಸಂಕಲ್ಪದಿಂದ ಟೈಟಲ್ ಗಳ ವಸ್ತ್ರವನ್ನು  ಮಾಡಿರಿ. ಧೃಡಸಂಕಲ್ಪವಾಗಿದೆ- ಬೆಲ್ಟ್, ಇದರಿಂದ ಬಿಗು ಮಾಡಿದಾಗ ಸದಾ ಸುರಕ್ಷಿತವಾಗಿರುತ್ತೀರಿ ಮತ್ತು ಸದಾ ಸೇವಾಧಾರಿಯಾಗಿ ಅಧೀನವಾಗಿರುತ್ತದೆ. ತಿಳಿಸಿದೆವಲ್ಲವೆ- ವಿಕಾರಗಳು ಪರಿವರ್ತನೆಯಾಗಿ ಸಹಯೋಗಿ, ಸೇವಾಧಾರಿಯಾಗಿಬಿಡುತ್ತದೆ. ಈಗ ವಸ್ತ್ರವನ್ನು ಧರಿಸುವುದು ಬಂದುಬಿಟ್ಟಿತು. ಟೈಟ್

ಮಾಡುವುದೂ ಬಂದುಬಿಟ್ಟಿತು. ಯಾವ ಸಮಯದಲ್ಲಿ ಯಾವ ವಸ್ತ್ರ ಬೇಕೋ ಅದನ್ನು ಧರಿಸಿರಿ, ಆದರೆ ಕೊಳಕಾದ ವಸ್ತ್ರವನ್ನು ತೊಡಬಾರದು ವೆರೈಟಿ ಡ್ರೆಸ್ ಮತ್ತು ವೆರೈಟಿ ಶೃಂಗಾರದ ಲಾಭವನ್ನು ತೆಗೆದುಕೊಳ್ಳಬೇಕು, ಬ್ರಹ್ಮ ಬಾಬಾ ಅಥವಾ ಬಾಪ್‌ದಾದಾರವರು ಸಂಗಮ ಯುಗದ ವರದಕ್ಷಿಣೆಯನ್ನು ಕೊಟ್ಟಿದ್ದಾರೆ ಮತ್ತು ಪ್ರೇಮ ವಿವಾಹ ಮಾಡಿಕೊಂಡಿದ್ದಾರೆ. ಅಂದಾಗ ದಕ್ಷಿಣೆಯೂ ಸಿಗುತ್ತದೆಯಲ್ಲವೆ. ಅಂದಮೇಲೆ ಈ ವೆರೈಟಿ ಶೃಂಗಾರದ ಸೆಟ್ ಮತ್ತು ಸುಂದರವಾದ ಡ್ರೆಸ್ ವರದಕ್ಷಿಣೆಯಾಗಿದೆ. ಬಾಪ್‌ದಾದಾರವರು ದಕ್ಷಿಣೆಯನ್ನು ಖಂಡಿತವಾಗಿಯೂ ಕೊಡುತ್ತಾರೆ ಹಾಗಾದರೆ ಕೊಟ್ಟಿರುವ ವರದಕ್ಷಣೆಯನ್ನು ಬಿಟ್ಟು ಜೊತೆಯಲ್ಲಿ ಹಳೆಯ ಡ್ರೆಸ್‌ನ್ನೂ ಬಚ್ಚಿಟ್ಟುಕೊಂಡಿದ್ದೀರಿ. ಆದ್ದರಿಂದ ಕೆಲವೊಮ್ಮೆ ಅದನ್ನೂ ಧಾರಣೆ ಮಾಡಿಕೊಂಡುಬಿಡುತ್ತೀರಿ. ಯಾರಿಗೆ ಯಾವಾಗ ಹಳೆಯದರೊಂದಿಗೆ ಸೆಳೆತವಾಗುತ್ತದೆಯೋ ಆಗ ಹಳೆಯ ವಸ್ತ್ರವನ್ನು ಧರಿಸಿಬಿಡುತ್ತಾರೆ. ಅಮೂಲ್ಯವಾದ ವಸ್ತ್ರವನ್ನು ಬಿಟ್ಟು ತೆಪೆಗಳಿರುವ ವಸ್ತ್ರವನ್ನು ಹಾಕಿಕೊಂಡುಬಿಡುತ್ತಾರೆ- ಈ ರೀತಿ ಎಂದಿಗೂ ಮಾಡಬಾರದು. ಈಗಿನವರೆಗೂ ಬಚ್ಚಿಟ್ಟುಕೊಂಡಿದ್ದೀರೆಂದರೆ ಸುಟ್ಟುಬಿಡಬೇಕಾಗಿದೆ. ಮತ್ತು ತಮ್ಮ ಬಳಿ ಸುಟ್ಟಿರುವ ಬೂದಿಯನ್ನೂ ಇಟ್ಟುಕೊಳ್ಳಬಾರದು. ಅದನ್ನೂ ಸಹ ಸಾಗರನಲ್ಲಿ ಸ್ವಾಹಾ ಮಾಡಿಬಿಟ್ಟಾಗ ಸದಾ ಶೃಂಗಾರಿತರಾಗಿರುತ್ತೀರಿ ಮತ್ತು ತಂದೆಯ ಜೊತೆಯಲ್ಲಿ ಹೃದಯ ಸಿಂಹಾಸನಾಧಿಕಾರಿ ಆಗಿರುತ್ತೀರಿ. ಸಿಂಹಾಸನದಿಂದ ಇಳಿದು ಬಂದರೆ ನೇಣುಗಂಬ ಬಂದುಬಿಡುತ್ತದೆ. ಕೆಲವೊಮ್ಮೆ ಲೋಭ, ಕೆಲವೊಮ್ಮೆ ಮೋಹವು ಬಂದುಬಿಡುತ್ತದೆ, ಅದಕ್ಕಾಗಿ ನೇಣುಗಂಬವನ್ನು ಬಿಟ್ಟು ಸಿಂಹಾಸನಾಧಿಕಾರಿಯಾಗಿ ಬಿಡಬೇಕು. ವರದಕ್ಷಿಣೆಯನ್ನು ಸಂಭಾಲನೆ ಮಾಡಿದ್ದೀರಲ್ಲವೆ, ಅದನ್ನು ಉಪಯೋಗಿಸಿ. ಅದನ್ನು ಹಾಗೆಯೇ ಇಟ್ಟುಬಿಡಬಾರದು. ಇದು ಬಹಳ ಚೆನ್ನಾಗಿದೆ, ಬಹಳ ಚೆನ್ನಾಗಿದೆ ಎಂದು ನೋಡುತ್ತಿರಬಾರದು, ಆದರೆ ಧಾರಣೆ ಮಾಡಬೇಕಾಗಿದೆ ಮತ್ತು ಡ್ರೆಸ್‌ನ ಸ್ಪರ್ಧೆಯಲ್ಲಿ ಮೊದಲನಂಬರಿನಲ್ಲಿ ಬಂದುಬಿಡಬೇಕು. ತಿಳಿಸಿದೆವಲ್ಲವೆ- ನಂಬರ್ ನಿರಂತರತೆಯ ಮೇಲೆ ಆಧಾರವಾಗಿದೆ. ಡ್ರೆಸ್ ತೊಡುವುದಂತು ಎಲ್ಲರಿಗೂ ಬರುತ್ತದೆ, ಆದರೆ ಡ್ರೆಸ್ ಸದಾ ಟಿಪ್‌ಟಾಪ್ ಆಗಿಟ್ಟುಕೊಳ್ಳುವುದು ಬರುವುದಿಲ್ಲ. ಅಂದಾಗ ಸದಾ ಶೃಂಗಾರಿತರ ನಂಬರ್ ಇದೆ. ಸ್ಪರ್ಧೆಯಲ್ಲಿ ವಿದೇಶದವರು ನಂಬರ್‌ವನ್ ತೆಗೆದುಕೊಳ್ಳುತ್ತಾರೆಯೇ ಅಥವಾ ಭಾರತದವರು ತೆಗೆದುಕೊಳ್ಳುತ್ತಾರೆಯೇ. ಯಾರೆಷ್ಟು ಬೇಕು ಅಷ್ಟೂ ತೆಗೆದುಕೊಳ್ಳಬಹುದು. ಅಲ್ಲಂತು ಬಹುಮಾನದ ಕಾರಣದಿಂದ ಒಬ್ಬರಿಗೆ ಮಾತ್ರ ಮೊದಲನಂಬರ್ ಸಿಗುತ್ತದೆ. ಇಲ್ಲಂತು ಅನೇಕರು ಮೊದಲ ನಂಬರಿನವರಾಗಬಹುದು, ಇಲ್ಲಿ ಅನಂತ ಖಜಾನೆಯಿದೆ, ಆದ್ದರಿಂದ ಯಾರೆಲ್ಲಾ ಫಸ್ಟ್ ಬರುತ್ತಾರೆಯೋ, ಅವರಿಗೆ ಫಸ್ಟ್ ಪ್ರೈಜ್ ಸಿಗುತ್ತದೆ. ಒಳ್ಳೆಯದು- ನಾಳೆಯಿಂದ ಏನು ಮಾಡುತ್ತೀರಿ?

ಅಮೃತವೇಳೆಯಿಂದ ಭಿನ್ನ ಭಿನ್ನ ಡ್ರೆಸ್ ಮತ್ತು ಶೃಂಗಾರದ ಸೆಟ್‌ನಿಂದ ಶೃಂಗಾರವನ್ನು ಮಾಡಿಕೊಂಡು, ತಂದೆಯ ಜೊತೆಯಿರಬೇಕಾಗಿದೆ. ಅಮೃತವೇಳೆಯಿಂದಲೇ ಮೊದಲನಂಬರಿನ ವಸ್ತ್ರವನ್ನು ಧರಿಸಿರಿ. ಇಂತಹ ಶೃಂಗಾರವಾಗಿರುವ ಪ್ರಿಯತಮೆಯರನ್ನೇ ಜೊತೆಯಲ್ಲಿ ಕರೆದುಕೊಂಡು ಹೋಗುತ್ತೇವೆ, ಅನ್ಯರನ್ನಿಲ್ಲ. ಯಾರು ಸ್ಪರ್ಧೆಯಲ್ಲಿ ಫಸ್ಟ್ ನಂಬರಿನಲ್ಲಿ ಬರುತ್ತಾರೆಯೋ ಅವರೇ ಜೊತೆಯಿರುತ್ತಾರೆ ಮತ್ತು ಜೊತೆಯಲ್ಲಿ ನಡೆಯುತ್ತಾರೆ. ಯಾರು ಇರುವುದಿಲ್ಲವೋ ಅವರು ನಡೆಯುವುದೂ ಇಲ್ಲ. ಅಂದಮೇಲೆ ಸದಾ ಈ ಸ್ಲೋಗನ್‌ನ್ನು ನೆನಪಿಡಿ ಅರ್ಥಾತ್ ಈ ತಿಲಕವನ್ನಿಟ್ಟುಕೊಳ್ಳಿರಿ- "ಜೊತೆಯಲ್ಲಿರುತ್ತೇವೆ, ಜೊತೆಯಲ್ಲಿ ನಡೆಯುತ್ತೇವೆ". ಸ್ಪರ್ಧೆ ಎಷ್ಟು ಚೆನ್ನಾಗಿರುತ್ತದೆಯೆಂದು ತಿಳಿದಿದ್ದೀರಲ್ಲವೆ. ಬಾಬಾರವರು, ಬ್ರಹ್ಮಾತಂದೆಗೆ ಇದನ್ನೆಲ್ಲವನ್ನೂ ತೋರಿಸುತ್ತಿರುತ್ತಾರೆ. ಮಕ್ಕಳ ನೆನಪಂತು ಬ್ರಹ್ಮಾತಂದೆಗೂ ಇರುತ್ತದೆ. ಅಂದಮೇಲೆ ಮಕ್ಕಳ ಸ್ಥಿತಿ-ಗತಿಯನ್ನು ನೋಡುತ್ತಿರುತ್ತಾರೆ.

**ಈ ರೀತಿ ಸದಾ ಶೃಂಗಾರಿತವಾಗಿರುವ ಮೂರ್ತಿ, ಸಂಗಮಯುಗೀ ಶ್ರೇಷ್ಠಜೀವನದ ಮಹತ್ವಿಕೆಯನ್ನು ತಿಳಿದಿರುವ ಮಹಾನ್ ಆತ್ಮರು, ಶತ್ರುಗಳನ್ನೂ ಸೇವಾಧಾರಿಯನ್ನಾಗಿ ಮಾಡಿಕೊಳ್ಳುವಂತಹ, ಸಹಯೋಗಿಯನ್ನಾಗಿ ಮಾಡಿಕೊಳ್ಳುವಂತಹ ಮಾಸ್ಟರ್ ಸರ್ವಶಕ್ತಿವಂತ, ಸದಾ ಹಾಗೂ ತಾವು, ವಿಚಿತ್ರವಾದ ಈ ಯುಗಲ್‌ರೂಪದಲ್ಲಿರುವಂತಹ, ಇಂತಹ ಪರಮ ಪೂಜ್ಯ ಮತ್ತು ಗಾಯನ ಯೋಗ್ಯ ಆತ್ಮರಿಗೆ ಬಾಪ್‌ದಾದಾರವರ ನೆನಪು-ಪ್ರೀತಿ ಹಾಗೂ ನಮಸ್ತೆ.**

**“ಶಿವಜಯಂತಿಯ ಮಹೋತ್ಸವವನ್ನು ಬಹಳ ವಿಜೃಂಭಣೆಯಿಂದ ಆಚರಿಸುವುದಕ್ಕಾಗಿ ಅವ್ಯಕ್ತ- ಬಾಪ್‌ದಾದಾರವರ ವಿಶೇಷ ಯೋಜನೆ”**

ಈಗ ಸೇವೆಯ ಒಳ್ಳೆಯ ಅವಕಾಶವು ಬರುತ್ತಿದೆ. ಸಾಕಾರ ಮತ್ತು ನಿರಾಕಾರ ಇಬ್ಬರನ್ನೂ ಪ್ರತ್ಯಕ್ಷಗೊಳಿಸುವ ಸಮಯವು ಸಮೀಪಕ್ಕೆ ಬರುತ್ತಿದೆ. ಇದರಲ್ಲಿ ಯಾವ ನವೀನತೆಯನ್ನು ಮಾಡುತ್ತೀರಿ? ಪ್ರತಿಯೊಂದು ಕಾರ್ಯಕ್ರಮದಲ್ಲಿ ಒಂದಲ್ಲಒಂದು ನವೀನತೆಯನ್ನಂತು ಮಾಡುತ್ತೀರಲ್ಲವೆ. ಅಂದಮೇಲೆ ಈ ಶಿವರಾತ್ರಿಯಲ್ಲಿ ವಿಶೇಷವಾಗಿ ಏನು ಮಾಡುವಿರಿ?

1. ಹೇಗೆ ಹಿಂದಿನಬಾರಿ ಲೈಟ್ ಅಂಡ್ ಸೌಂಡ್‌ನ ಸಂಕಲ್ಪವನ್ನಿಟ್ಟಿದ್ದಿರಿ, ಅದೇರೀತಿ ಪ್ರತಿಯೊಬ್ಬರೂ ತಮ್ಮ-ತಮ್ಮ ಸ್ಥಾನಗಳಲ್ಲಿ ಯಥಾಶಕ್ತಿ ಮಾಡಿದರು. ಶಿವರಾತ್ರಿಯಲ್ಲಿ ಹೇಗೆ ಗೀತೆಯ ಭಗವಂತನನ್ನು ಸಿದ್ಧ ಮಾಡುವಂತಹ ಲಕ್ಷ್ಯವನ್ನಿಡುತ್ತೀರಲ್ಲವೆ ಆದರೆ ಕಟಾಕ್ಷ ಮಾಡುವುದರಿಂದ ಮನುಷ್ಯರಿಗೆ ಅರ್ಥ ಆಗುವುದಿಲ್ಲ. ಇದಕ್ಕಾಗಿ ಈ ಬಾರಿ ಶಿವರಾತ್ರಿಯ ದಿನದಂದು ಎರಡು ಚಿತ್ರಗಳನ್ನು ವಿಶೇಷವಾಗಿ ಶೃಂಗಾರ ಮಾಡಿರಿ- ಒಂದು ನಿರಾಕಾರ ಶಿವನದು, ಇನ್ನೊಂದು ಶ್ರೀಕೃಷ್ಣನದು. ವಿಶೇಷವಾಗಿ ಎರಡೂ ಚಿತ್ರಗಳನ್ನು ಈ ರೀತಿ ಶೃಂಗಾರ ಮಾಡಿಟ್ಟುಕೊಳ್ಳಬೇಕು, ಹೇಗೆಂದರೆ ಕಿರಣಗಳ ಚಿತ್ರವನ್ನು ಮಾಡುತ್ತೀರಲ್ಲವೆ. ಶಿವನ ಕಿರಣಗಳಿರುವ ಚಿತ್ರವೂ ಶೃಂಗಾರಿತವಾಗಿರಲಿ ಮತ್ತು ಶ್ರೀಕೃಷ್ಣನ ಚಿತ್ರವೂ ಕಿರಣಗಳಿರುವ ಚಿತ್ರವು ಶೃಂಗಾರಿತವಾಗಿರಲಿ, ವಿಶೇಷವಾಗಿ ಎರಡೂ ಚಿತ್ರಗಳು ಆಕರ್ಷಣೆಯಾಗುವಂತಿರಲಿ. ಕೃಷ್ಣನ ಚಿತ್ರದ ಮಹಿಮೆಯೇ ಬೇರೆ ಮತ್ತು ಶಿವನ ಮಹಿಮೆಯೇ ಬೇರೆಯಾಗಿದೆ. ಕಟಾಕ್ಷ ಮಾಡಬೇಡಿ ಆದರೆ ಇಬ್ಬರ ಅಂತರವನ್ನು ಸಿದ್ಧ ಮಾಡಿರಿ. ಸ್ಟೇಜಿನ ವಿಶೇಷ ಶೋ ಇವೆರಡು ಚಿತ್ರಗಳಾಗಿರಲಿ, ಹೇಗೆ ಯಾವುದೇ ಸಮ್ಮೇಳನ ಮುಂತಾದವನ್ನು ಮಾಡುತ್ತೀರೆಂದರೆ, ಸಮ್ಮೇಳನದ ಸಂಕೇತಕ್ಕೆ ಶೃಂಗಾರ ಮಾಡಿಡುತ್ತೀರಿ. ನಂತರ ಅದರ ಅನಾವರಣವನ್ನು ಮಾಡಿಸುತ್ತೀರಿ. ಹಾಗೆಯೇ ಶಿವರಾತ್ರಿಯಲ್ಲಿ ಯಾವುದಾದರೂ ವಿ.ಐ.ಪಿ.ಯ ಮೂಲಕ ಇವೆರಡು ಚಿತ್ರಗಳ ಅನಾವರಣ (ಒಪನಿಂಗ್) ಮಾಡಿಸಿರಿ ಮತ್ತು ಅವರಿಗೆ ಸ್ವಲ್ಪಮಟ್ಟಿಗೆ ಅವೆರಡರ ಅಂತರವನ್ನು ಸ್ಪಷ್ಟಮಾಡಿ ತಿಳಿಸಿರಿ, ನಂತರ ಸಭೆಯಲ್ಲಿಯೂ ಅವರಿಗೆ ಶಿವನ ಬಗ್ಗೆ ಭಾಷಣ ಮಾಡುವುದರ ಜೊತೆಜೊತೆಗೆ ಇವೆರಡೂ ಚಿತ್ರಗಳನ್ನು ಇಡಿ. ಭಾಷಣ ಮಾಡುವುದರ ಜೊತೆಜೊತೆಗೆ, ಇದು ಇದಾಗಿದೆ- ಇದು ಇದಾಗಿದೆ ಎಂದು ಚಿತ್ರವನ್ನೂ ತೋರಿಸುತ್ತಿರಬೇಕು., ಈ ರೀತಿ ತೋರಿಸುತ್ತಿರುವಾಗ ಎಲ್ಲರ ಗಮನವೂ ಚಿತ್ರದ ಕಡೆಗೆ ಹೋಗುತ್ತದೆ. ಮೊದಲು ಅಂತರವನ್ನು ತಿಳಿಸಿರಿ ನಂತರ ಅವರಿಗೆ ಹೇಳಿರಿ ಈಗ ತಾವೇ ನಿರ್ಣಯ ಮಾಡಿರಿ, ರಚಯಿತ ಯಾರು ಮತ್ತು ರಚನೆ ಯಾರು? ಅಂದಾಗ ಗೀತೆಯ ಜ್ಞಾನವನ್ನು ರಚಯಿತನು ಕೊಟ್ಟರೆ ಅಥವಾ ರಚನೆಯು ಕೊಟ್ಟರೆ? ಅದಕ್ಕಾಗಿ ಈ ಶಿವರಾತ್ರಿಯಲ್ಲಿ ವಿಶೇಷವಾಗಿ ಇವೆರಡು ಚಿತ್ರಗಳ ಮಹತ್ವಿಕೆಯನ್ನಿಡಿ.

2. ಹೇಗೆ ಹಿಂದಿನಸಾರಿ ಲೈಟ್ ಅಂಡ್ ಸೌಂಡ್‌ನ ಕಾಮೆಂಟ್ರಿಯು ರೆಕಾರ್ಡಿಂಗ್ ಆಗಿತ್ತು. ಆ ರೀತಿ ಮಾಡುವುದಲ್ಲ ಆದರೆ ಕಾರ್ಯಕ್ರಮದ ಮಧ್ಯದಲ್ಲಿ ಶಿವತಂದೆಯ ಶೃಂಗಾರಿತವಾಗಿರುವ ಕಿರಣಗಳ ಚಿತ್ರವನ್ನು ಮುಂದೆತನ್ನಿರಿ ಮತ್ತು ಮುಂದಿಡುವಾಗ ಉಳಿದೆಲ್ಲಾ ಲೈಟ್‌ಗಳನ್ನು ಬಂದ್ ಮಾಡಿಬಿಡಿ, ಆ ಚಿತ್ರದ ಲೈಟ್ ಮಾತ್ರವೇ ಇರಲಿ, ನಂತರ ಆ ಸಮಯದಲ್ಲಿ ನಿಧಾನ-ನಿಧಾನವಾಗಿ ಡೈರೆಕ್ಟ್ ಆಗಿ ತಂದೆಯ ಮಹಿಮೆಯನ್ನು ಮಾಡಿರಿ, ಮಹಿಮೆಯನ್ನು ಮಾಡುತ್ತಾ ಅವರನ್ನೂ ಮಹಿಮೆಯಲ್ಲಿ ತೆಗೆದುಕೊಂಡು ಹೋಗಬೇಕು. ಮಹಿಮೆಯನ್ನು ತಿಳಿಸುತ್ತಾ ಅನುಭವ ಮಾಡಿಸಿರಿ, ಶಾಂತಿಯ ಸಾಗರ ಎಂದು ಹೇಳಿದಾಗ ಶಾಂತಿಯ ಕಿರಣಗಳು ಹರಡಲಿ. ಯಾವುದೇ ಗುಣದ ವರ್ಣನೆಯ ಪ್ರಕಂಪನಗಳ ಹರಡಲಿ, ಆ ಸಮಯದಲ್ಲಿ ಎಲ್ಲಾ ಲೈಟುಗಳು ಬಂದ್ ಆಗಿರಬೇಕು. ಎಲ್ಲರ ಗಮನವು ಕೇವಲ ಆ ಒಂದು ಚಿತ್ರದಕಡೆಯಿರಬೇಕು. ನಿಧಾನ- ನಿಧಾನವಾಗಿ ಇಂತಹ ಅನುಭವ ಮೂರ್ತಿಯಾಗಿದ್ದು ಮಹಿಮೆ ಮಾಡಿರಿ. ಹೇಗೆಂದರೆ ಜೊತೆಯಲ್ಲಿಯೇ ಹೋಗುತ್ತಿದ್ದೇವೆ. ಶಾಂತಿಯ ಸಾಗರ ಎಂದು ಹೇಳಿದಾಗ, ಅದೇ ಸಾಗರನಲ್ಲಿ ಮುಳುಗಿದ್ದೇವೆಂಬ ಅನುಭವ ಮಾಡಿಸಿರಿ. ಹೇಗೆ ಯೋಗದ ಕಾಮೇಂಟ್ರಿಯನ್ನು ನಿಧಾನ-ನಿಧಾನವಾಗಿ ಕೊಡುತ್ತೀರೋ ಹಾಗೆಯೇ ಅವರಿಗೆ ಲಕ್ಷ್ಯವನ್ನು

ಕೊಟ್ಟು ಅದೇರೀತಿಯಲ್ಲಿ ಕೂರಿಸುತ್ತೀರೆಂದರೆ- ಒಂದು ಕಡೆ ಗಮನ ಹರಿಯುತ್ತದೆ, ಮತ್ತೊಂದು ಅಂತರವು ತಿಳಿಯುತ್ತದೆ. ಸಿದ್ಧ ಮಾಡುವ ಅವಶ್ಯಕತೆಯಿರುವುದಿಲ್ಲ, ಸ್ವತಹವಾಗಿಯೇ ಸಿದ್ಧವಾಗಿಬಿಡುತ್ತದೆ.

3. ಪ್ರತಿಯೊಂದು ಕಾರ್ಯಕ್ರಮದಲ್ಲಿ ಯೋಗಶಿಬಿರದ ಕಾರ್ಯಕ್ರಮದ ಅನೌನ್ಸಮೆಂಟ್' ಅವಶ್ಯವಾಗಿ ಮಾಡಿರಿ, ಭಲೆ ಒಂದುದಿನದ ಕಾರ್ಯಕ್ರಮವನ್ನೇ ಮಾಡುತ್ತೀರಿ, ಆದರೆ ಯೋಗಶಿಬಿರದ ಫಾರ್ಮ್‌ನ್ನು ಖಂಡಿತವಾಗಿಯೂ ತುಂಬಿಸಬೇಕು. ಯೋಗಶಿಬಿರದ ಫಾರ್ಮ್‌ನ ವಿಶೇಷ ಟೇಬಲ್‌ನ್ನು ತಯಾರು ಮಾಡಿಡಬೇಕು. ಅದರಲ್ಲಿ ಸಮೀಪದ ಸ್ಥಾನಕ್ಕಾಗಿ ಫಾರ್ಮ್ಸ್ ತುಂಬಿಸಬೇಕು. ಅಂದಮೇಲೆ ಯಾರು ಹಿಂದೆ ಯೋಗಶಿಬಿರವನ್ನು ಮಾಡಲು ಬರುತ್ತಾರೆ, ಅವರು ಸಂಪರ್ಕದಲ್ಲಿ ಬಂದುಬಿಡುತ್ತಾರೆ. ಯೋಗಶಿಬಿರದ ಫಾರ್ಮ್ ತುಂಬಿಸಿದ ನಂತರವೂ ಸಂಪರ್ಕದಲ್ಲಿ ತರುತ್ತಿರಬೇಕು. ಯಾವುದೇ ಕಾರ್ಯಕ್ರಮವನ್ನು ಮಾಡುತ್ತೀರಿ, ಅದರಲ್ಲಿ ಯೋಗಶಿಬಿರಕ್ಕೆ ವಿಶೇಷವಾಗಿ ಮಹಿತ್ವಿಕೆಯನ್ನು ಕೊಡಬೇಕು.

4. ಯಾವುದೇ ಅವಕಾಶಗಳು ಸಿಗುತ್ತವೆ ಮತ್ತು ಯಾರೇ ಸಂಪರ್ಕದಲ್ಲಿ ಬರುತ್ತಾರೆ, ಅಥವಾ ಯಾವುದೇ ವಿಘ್ನಗಳ ಕಾರಣದಿಂದ ಓಡಿಹೋಗಿದ್ದಾರೋ ಅವರನ್ನು ಇಂತಹ ಸಂದರ್ಭದಲ್ಲಿ ವಿಶೇಷವಾಗಿ ನಿಮಂತ್ರಣ ಕೊಡಿ. ಯಾರು ತಮ್ಮ ಬಲಹೀನತೆಗಳ ಕಾರಣದಿಂದ ಹಿಂದುಳಿದಿದ್ದಾರೆಯೋ, ಅವರನ್ನು ಸ್ನೇಹದಿಂದ ಮುಂದುವರೆಸಬೇಕಾಗಿದೆ. ಇಂತಹ ಕಾರ್ಯಕ್ರಮಗಳಿಂದ ಅವರಲ್ಲಿಯೂ ಜಾಗೃತಿ ಬರುತ್ತದೆ. ಉಮ್ಮಂಗದಲ್ಲಿ. ಬಂದುಬಿಡುತ್ತಾರೆ.

**ಸೇವಾಧಾರಿ ಮಕ್ಕಳ ಪ್ರತಿ ಅವ್ಯಕ್ತ ಬಾಪ್‌ದಾದಾರವರ ಮಹಾವಾಕ್ಯಗಳು.**

ಸೇವಾಧಾರಿ ಮಕ್ಕಳ ಮಹಿಮೆಯಂತು ಬಹಳ ಮಹಾನ್ ಆಗಿದೆ ಏಕೆಂದರೆ ತಂದೆಯ ಸಮಾನರಾಗಿದ್ದೀರಲ್ಲವೆ. ತಂದೆಯೂ ಸಹ ಮಕ್ಕಳ ಸೇವೆಯನ್ನು ಮಾಡಲು ಬರುತ್ತಾರೆ ಮತ್ತು ತಾವೂ ಸಹ ನಿಮಿತ್ತರಾಗಿದ್ದೀರಿ, ಅಂದಮೇಲೆ ಸಮಾನತೆಯಾಯಿತಲ್ಲವೆ. ಸಮಾನರಿರುವವರ ಮಹಿಮೆಯೇ ಆಗುತ್ತದೆ. ಸಮಾನರಿರುವರೇ ಸದಾ ಜೊತೆಯಿರಲು ಸಾಧ್ಯವಾಗುತ್ತದೆ. ಸಮಾನರಿಲ್ಲವೆಂದರೆ ಜೊತೆಯೂ ಇರುವುದಿಲ್ಲ. 'ತಂದೆಯ ಸಮಾನ ಅರ್ಥಾತ್ ಸದಾ ಸ್ವಮಾನದಲ್ಲಿರುವವರು'. ಹೇಗೆ ತಂದೆಯು ತಮ್ಮ ಸ್ವಮಾನವನ್ನೆಂದಾದರೂ ಮರೆಯುತ್ತಾರೆಯೇ? ಅಂದಮೇಲೆ ತಂದೆಯ ಸಮಾನ ಅರ್ಥಾತ್ ಸದಾ ಸ್ವಮಾನದಲ್ಲಿರುವವರು. ಈ ರೀತಿಯಿದ್ದೀರಾ? ಸದಾ ತಂದೆ ಮತ್ತು ಸೇವೆ- ಇವೆರಡೂ ಸ್ಮೃತಿಗಳು ಈ ರೀತಿ ಇರುತ್ತದೆ, ಹೇಗೆ ಶರೀರದ ಸ್ಮೃತಿಯು ಸ್ವತಹವಾಗಿ ಇರುತ್ತದೆ. ನೆನಪು ಮಾಡಬೇಕಾಗಿರುವುದಿಲ್ಲ ಆದರೆ ಸ್ವತಹವಾಗಿಯೇ ನೆನಪಿರುತ್ತದೆ. ಅದೇರೀತಿ ತಂದೆಯ ನೆನಪು ಮತ್ತು ಸೇವೆಯೂ ಸಹ ಸ್ವತಹವಾಗಿ ನೆನಪಿರಲಿ. ಒಂದುವೇಳೆ ತಾವೂ ಸಹ ಪರಿಶ್ರಮಪಟ್ಟು ನೆನಪಿನಲ್ಲಿ ಇರುತ್ತೀರೆಂದರೆ ಅನ್ಯರನ್ನು ಸಹಜಯೋಗಿಯನ್ನಾಗಿ ಹೇಗೆ ಮಾಡುತ್ತೀರಿ! ಸೇವಾಧಾರಿ ಮಕ್ಕಳ ಕರ್ತವ್ಯವೇ ಆಗಿದೆ- 'ಸಹಜಯೋಗಿ', 'ಸ್ವತಹಯೋಗಿ'.

**ಬೇಬಿ (ಮಗು) ಅಲ್ಲ ಬೀಬಿ (ಒಡತಿ).**

ಈಗ ಸಮಯಾನುಸಾರವಾಗಿ ಪರಿಶ್ರಮವು ಸಮಾಪ್ತಿಯಾಗಬೇಕು. ಒಂದುವೇಳೆ ಈಗಲೂ ಪರಿಶ್ರಮದ ಅನುಭವಾಗುತ್ತಿದೆ ಅವಾ ಏಕೆ, ಏನು ಎನ್ನುವ ಪ್ರಶ್ನೆಯಲ್ಲಿದ್ದರೆ ತಮ್ಮ ಕರ್ತವ್ಯವನ್ನು ಅಭಿನಯಿಸಲು ಸಾಧ್ಯವಿಲ್ಲ. ಏಕೆ, ಏನು ಎನ್ನುವುದು ಅರ್ಥಾಥ್ ಕ್ಯೂನಲ್ಲಿ ನಿಂತುಕೊಳ್ಳುವುದಾಗಿದೆ. ಒಂದುವೇಳೆ ಸ್ವಯಂ ತಾವೇ ಕ್ಯೂನಲ್ಲಿದ್ದರೆ, ಅನ್ಯರನ್ನು ಹೇಗೆ ತೃಪ್ತಾತ್ಮರನ್ನಾಗಿ ಮಾಡಲು ಸಾಧ್ಯ? ಸ್ವಯಂ ತಾವೇ ತೆಗೆದುಕೊಳ್ಳುವವರಾದರೆ ದಾತನಾಗುವುದು ಹೇಗೆ? ಸೇವಾಧಾರಿ ಅರ್ಥಾತ್ ಕೊಡುತ್ತಾ ಹೋಗುವುದು ಮತ್ತು ಜೊತೆಯನ್ನು ತೆಗೆದುಕೊಳ್ಳುತ್ತಾ ಹೋಗಿರಿ. ಯಾರು ಸ್ವಯಂ ಏಕೆ ಏನು ಎನ್ನುವವರಾಗಿದ್ದಾರೆ, ಅವರಂತು ಬಿಕಾರಿಯಂತೆ ಬೇಡುವವರಾಗಿರುತ್ತಾ ಶಕ್ತಿ ಕೊಡಿ, ಸಹಯೋಗ ಕೊಡಿ, ನಾನು ಈ ಕಾರ್ಯವನ್ನು ಮಾಡುತ್ತಿದ್ದೇನೆ ತಾವು ಸಫಲತೆಯನ್ನು ಕೊಡಿ, ಈ

ಅರ್ಜಿಯೂ ಸಹ ರಾಯಲ್ ಬಿಕಾರಿತನವಾಗಿದೆ. ಯಾರು ಸ್ವಯಂ ಬಿಕಾರಿಗಳ ಕ್ಯೂನಲ್ಲಿರುತ್ತಾರೆ, ಅವರು ದಾತನಾಗಿ ಅನರಿಗೆ ಕೊಡಲು ಹೇಗೆ ಸಾಧ್ಯ! ಈಗ ಬಾಲ್ಯತನವು ಸಮಾಪ್ತಿಯಾಯಿತು. ಬಾಲ್ಯದಲ್ಲಿ ಎಲ್ಲದರಲ್ಲಿಯೂ ಸ್ವಾತಂತ್ರ್ಯವಿತ್ತು ಅಳುವುದಕ್ಕೂ-ಫೀಲಿಂಗ್‌ನಲ್ಲಿ ಬರುವುದಕ್ಕೆ, ಸಂಕಲ್ಪಗಳಿಗೂ ಸ್ವಾತಂತ್ರ್ಯವಿತ್ತು. ಈಗಿಲ್ಲ. ಈಗಂತು ವಾನಪ್ರಸ್ಥದವರೆಗೆ ತಲುಪಿದ್ದೀರಲ್ಲವೆ. ಬಾಲ್ಯದ ಮಾತುಗಳು ವಾನಪ್ರಸ್ಥದಲ್ಲಿ ಇರುವುದಿಲ್ಲ. ಇದರಲ್ಲಿ ಏಕೆ, ಏನು ಎನ್ನುವುದಿರಬಾರದು. ಏಕೆ, ಏನು ಎನ್ನುವವರು ಅರ್ಥಾತ್ ಬೇಬಿ ಕ್ವಾಲಿಟಿಯವರು. ಯಾರು ಬೇಬಿ ಆಗಿರುತ್ತಾರೆಯೋ ಅವರು ಬೀಬಿ ಆಗುವುದಿಲ್ಲ. ಈಗಂತು ಮಿಯಾ ಮತ್ತು ಬೀಬಿಯ ವ್ಯಾಪಾರವಾಗಿದೆ. ಈಗ ಬೇಬಿಯ ಗುಣವು ಸಮಾಪ್ತಿಯಾಯಿತು, ತಂದೆಯ ಸಮಾನರಾದರೆ ಬೀಬಿ ಮತ್ತು ಮಿಯಾ ಆಗುತ್ತೀರಿ. ಚಿಕ್ಕಮಕ್ಕಳಿಗೆ ಸಮಾನ ಎಂದು ಹೇಳುವುದಿಲ್ಲ. ಯಾವಾಗ ಮಗು ದೊಡ್ಡದಾಗಿಬಿಡುತ್ತದೆ ಅಥವಾ ತಂದೆಯ ಸಮಾನವಾಗುತ್ತದೆಯೋ, ಆಗ ಸಮಾನ ಎಂದು ಹೇಳಲಾಗುತ್ತದೆ. ಅಂದಮೇಲೆ ಈಗ ಬೇಬಿ ಕ್ವಾಲಿಟಿಯು ಸಮಾಪ್ತಿ. ಎಲ್ಲವೂ ನಿಮ್ಮದೋ ಅಥವಾ ಯಾವುದೂ ನಿಮ್ಮದಲ್ಲವೋ. ಸಂಸ್ಕಾರ ಮಿಲನವಾಗುತ್ತಿಲ್ಲ ಎನ್ನುವ ಸಂಕಲ್ಪ ಬರಬಾರದು. ಮಿಲನ ಮಾಡಲೇಬೇಕಾಗಿದೆ. ಮಿಲನವಾಗುತ್ತಿಲ್ಲ ಎಂದು ಯಾರು ಹೇಳುತ್ತಾರೆ? ಇವರು ಬದಲಾಗುತ್ತಿಲ್ಲ, ಕೇಳುವುದಿಲ್ಲ. ಈ ಇಲ್ಲ-ಇಲ್ಲ ಎನ್ನುವ ಭಾಷೆಯು ಯಾರದಾಗಿದೆ? ಈಗಂತು ಆಗಲೇಬೇಕಾಗಿದೆ. ಹಾಂಜಿ. 'ಇಲ್ಲ' ಎನ್ನುವ ಶಬ್ಧವು ಸಮಾಪ್ತಿ. ಅಂದಾಗ ಎಲ್ಲರೂ ಹಾ ಹಾ ಎನ್ನುವವರಲ್ಲವೆ. ಈಗ ಬೇಹದ್ದಿನವರಾಗಿ, ಹದ್ದನ್ನು ಬಿಟ್ಟುಬಿಡಬೇಕಾಗಿದೆ. ತಿಳಿಸಿದೆವಲ್ಲವೆ- ಯಾರೇ ಜೋನ್ ಹೆಡ್ ಆಗಿದ್ದಾರೆ, ಅದೂ ಸಹ ಹದ್ದು ಆಯಿತು. ನಕ್ಷೆಯಲ್ಲಿ ನೋಡಿರಿ-ತಮ್ಮ ಜೋನ್ ಯಾವುದಾಗಿದೆ? ಬಿಂದು. ಅಂದಮೇಲೆ ಅದು ಹದ್ದು ಆಯಿತಲ್ಲವೆ. ಈಗ ಇಂತಹ ಸ್ಥಾನದವರಾಗಿದ್ದಾರೆ, ಎನ್ನುವುದೂ ಇರಬಾರದು. ಇಂತಹ ಸ್ಥಾನದಲ್ಲಿಯೇ ಸರಿಯಿದ್ದಾರೆ ಎಂಬುದೂ ಇರಬಾರದು. ಬೇಹದ್ದಿನ ಮಾಲೀಕರಾಗಿರಬೇಕೇ ಅಥವಾ ಒಂದೇ ಸ್ಥಾನದಲ್ಲಿರಬೇಕೇ? ಸ್ವಲ ಗಾನವು ಹುಡುಗಾಟಿಕೆಯ ಕಾರಣದಿಂದ ತೆಗೆದುಕೊಳ್ಳುವುದಿಲ್ಲ. ತಂದೆಯ ಬಲ ಏನಿದೆಯೋ, ಅದನ್ನು ಕೊಡುವುದಕ್ಕಾಗಿ ಇದೆ, ಅಂದಮೇಲೆ ತಂದೆಯು ಎಲ್ಲರಿಗೂ ಕೊಡುತ್ತಾರೆ, ತೆಗೆದುಕೊಳ್ಳುವವರು ನಂಬರ್‌ವಾರ್ ಇದ್ದಾರೆ.

ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 09-01-1980.

***ಅಲೌಕಿಕ ವಸ್ತ್ರ ಮತ್ತು ಅಲೌಕಿಕ ಶೃಂಗಾರ.***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಆನಂದ ಸ್ವರೂಪ, ಶಿವ ಪರಮಾತ್ಮನ ತಂದೆ.

1. ನಾನು ತಂದೆಯಿಂದ ಲಭಿಸಿರುವ ಭಿನ್ನ-ಭಿನ್ನ ಬಿರುದುಗಳ ಸ್ಥಿತಿ ಎಂಬ ವಸ್ತ್ರ ಮತ್ತು ಗುಣಗಳ ಅಲಂಕಾರದ ಸೆಟ್‌ಅನ್ನು ಧರಿಸಿ ಸೀಟ್ನ ಮೇಲೆ ಸ್ಥಿತವಾಗಿದ್ದೇನೆ.

2. ನಾನು ಎಂತಹ ಸಮಯವೋ, ಎಂತಹ ಕರ್ತವ್ಯವೋ, ಅಂತಹ ವಸ್ತ್ರಗಳನ್ನು (ಸ್ಥಿತಿಯಲ್ಲಿರುವುದು) ಧರಿಸಿ ಗುಣಗಳಿಂದ ಶೃಂಗಾರ ಮಾಡಿಕೊಂಡಿದ್ದೇನೆ.

3. ನಾನು ಆನಂದ ಸ್ವರೂಪ ಎಂಬ ಸ್ಮೃತಿಯಿಂದ ಮಸ್ತಕದ ತಿಲಕ, ಆನಂದ ಕೊಡುವ ಮಾತುಗಳಿಂದ ಕಂಠದ ಹಾರ, ಕೈಗಳಿಂದ ಆನಂದ ಸ್ವರೂಪದ ಕರ್ಮವನ್ನು ಮಾಡಿ ಬಳೆಗಳು, ಆನಂದ ಸ್ವರೂಪ ರಾಗುವ ವಿಷಯಗಳನ್ನು ಕೇಳುತ್ತಾ ಕಿವಿಗೆ ಶೃಂಗಾರ ಮತ್ತು

ಆನಂದದ ಸ್ವರೂಪವಾಗಿ ತಯಾರು ಮಾಡುವ ಸೇವೆಯನ್ನು ಮಾಡುವ ಕಡೆ ಹೆಜ್ಜೆಯನ್ನು ಇಟ್ಟು ಪಾದಗಳಿಗೆ ಆಭರಣ ಹೀಗೆ ಅಲಂಕಾರದ ಸೆಟ್ ಅನ್ನು ಧರಿಸಿರುವ ಶೃಂಗಾರ ಸ್ವರೂಪ.

(ಆನಂದ ಎಂಬುದು ಒಂದು ಸೆಟ್ ಹೀಗೆ ಸರ್ವ ಗುಣಗಳ ಸೆಟ್ ಇರುತ್ತದೆ)